ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

ರಾಜೀವ್ ವಿಜಯಸಾರಥಿ ರತ್ನಂ -ವಿರುದ್ಧ-ಸುಧಾ ಸೀತಾರಾಂ

ರಿಟ್ ಅರ್ಜಿಸಂಖ್ಯೆ: 14032/2019 (ಜಿಎಂ-ಸಿಪಿಸಿ),ದಿನಾಂಕ: 16 ನೇ ಅಕ್ಟೋಬರ್, 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್:

ಮೂಲ ದಾವೆಸಂಖ್ಯೆ: 1305/2013 ರಲ್ಲಿ ತೀವ್ರವಾಗಿ ಮೊಕದ್ದಮೆ ನಡೆಸಿದ ಹಣದ ದಾವೆಯಲ್ಲಿ ವಾದಿಯಾಗಿರುವ ಅರ್ಜಿದಾರರು,ದಿನಾಂಕ: 15.3.2019 ರ ಆದೇಶವನ್ನು ಪ್ರಶ್ನಿಸುವುದಕ್ಕಾಗಿ ಈ ನ್ಯಾಯಾಲಯದ ರಿಟ್ ಅಧಿಕಾರವ್ಯಾಪ್ತಿಯನ್ನು ಕೋರುತ್ತಿದ್ದು, ಅದರ ಪ್ರತಿಯನ್ನು ಅನುಬಂಧ-ಎಚ್ನಲ್ಲಿ ನೀಡಲಾಗಿದೆ.ಅದರಲ್ಲಿ XLI ನೇ ಹೆಚ್ಚುವರಿ ನಗರ ಸಿವಿಲ್ ನ್ಯಾಯಾಧೀಶರು, ಬೆಂಗಳೂರು ಇವರು ಸಾಕ್ಷಿಗಳನ್ನು ಅಂದರೆ ಡಿಡಬ್ಲ್ಯು 3 ಹಾಗೂ ಡಿಡಬ್ಲ್ಯು 4 ಗಳನ್ನು ಪ್ರತಿಕೂಲ ಸಾಕ್ಷಿಯಂತೆ ಪರಿಗಣಿಸಿ, ಆ ಸಾಕ್ಷಿಗಳನ್ನು ತನ್ನ ಸ್ವಂತ ಸಾಕ್ಷಿದಾರರೆಂದು ಕರೆದಿದ್ದ ಪ್ರತಿವಾದಿಯು ಅವರ ಪಾಟೀ ಸವಾಲನ್ನು ನಡೆಸುವುದಕ್ಕೆ ಅನುಮತಿ ನೀಡಿರುತ್ತಾರೆ.

2. ಪ್ರಕರಣದ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ:

(ಎ) ಅರ್ಜಿದಾರ-ವಾದಿಯು, ಪ್ರತಿವಾದಿ-ಪ್ರತ್ಯರ್ಜಿದಾರನಿಗೆ ಅಳಿಯನಾಗಬೇಕು.ದಾವೆಯು ಭಾರತೀಯ ನಗದಿನಲ್ಲಿ 26 ಲಕ್ಷ ರೂಪಾಯಿಗಳನ್ನು ಬಡ್ಡಿಯೊಂದಿಗೆ ವಸೂಲಿ ಮಾಡುವುದಕ್ಕೆ ಸಂಬಂಧಿಸಿರುತ್ತದೆ; ಪ್ರತ್ಯರ್ಜಿದಾರಳು ದಾವೆಯನ್ನು ಪ್ರತಿರೋಧಿಸಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾಳೆ.ದಿನಾಂಕ: 24.9.2013 ರಂದು ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು ವಿವಾದಾಂಶಗಳನ್ನು ರೂಪಿಸಿರುತ್ತಾರೆ.ಹಾಗೂದಿನಾಂಕ: 06.04.2016 ರಂದು ಹೆಚ್ಚುವರಿ ವಿವಾದಾಂಶಗಳನ್ನು ಸಹ ರೂಪಿಸಿರುತ್ತಾರೆ.

(ಬಿ) ಪ್ರತ್ಯರ್ಜಿದಾರಳು, ಹಣವನ್ನು ಅನ್ಯ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆಯೆಂದು ಆಪಾದಿಸಿ ಫೆಬ್ರವರಿ 2016 ರಲ್ಲಿ ಅರ್ಜಿದಾರನ ತಂದೆ-ತಾಯಿಯ ವಿರುದ್ಧ ಪಿಸಿಆರ್‌ಸಂಖ್ಯೆ: 2116/2016 ರಲ್ಲಿ ಖಾಸಗಿ ದೂರನ್ನು ಸಲ್ಲಿಸಿರುತ್ತಾಳೆ; ಈ ಕ್ರಿಮಿನಲ್ ವ್ಯವಹರಣೆಗಳಿಗೆ ಕ್ರಿಮಿನಲ್ ಅರ್ಜಿಸಂಖ್ಯೆ: 3675/2016 ರಲ್ಲಿ ಈ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ; ತರುವಾಯ ಇತರ ವಿಷಯಗಳೊಂದಿಗೆ ವಿವಾದವು ಸಿವಿಲ್ ಸ್ವರೂಪದ್ದೆಂದು ಅಭಿಪ್ರಾಯಪಟ್ಟು ಆದೇಶದಿನಾಂಕ: 15.2.2019 ರ ಮೇರೆಗೆ ಎಸ್.ಎಲ್.ಪಿ. (ಕ್ರಿಮಿನಲ್) ಡೈರಿಸಂಖ್ಯೆ: 1434/2018 ರಲ್ಲಿ ಸರ್ವೋಚ್ಚ ನ್ಯಾಯಾಲಯವು ಅದನ್ನು ರದ್ದುಪಡಿಸಿರುತ್ತದೆ;

(ಸಿ) ದಾವೆಗೆ ಹೆಚ್ಚುವರಿ ಪ್ರತಿವಾದಿಗಳಂತೆ ಅರ್ಜಿದಾರರ ತಂದೆ-ತಾಯಿಯರನ್ನು ಪಕ್ಷಕಾರರನ್ನಾಗಿ ಮಾಡಬೇಕೆಂಬುದಕ್ಕೆ ಸಂಬಂಧಿಸಿದಂತೆ ದಂಡ ಸಂಹಿತೆ 1908 ರ ಕ್ರಮಾದೇಶ- I ನಿಯಮ 102) ರಡಿಯಲ್ಲಿ ಸಲ್ಲಿಸಿದದಿನಾಂಕ: 19.01.2017 ರ ಪತ್ಯರ್ಜಿದಾರರ ಅರ್ಜಿಗೆದಿನಾಂಕ: 6.10.2018 ರಂದು ಅಧಿವಿಚಾರಣಾ ನ್ಯಾಯಾಲಯವು ನಕಾರಾತ್ಮಕವಾಗಿ ತೀರ್ಪು ನೀಡಿರುತ್ತದೆ; ಪ್ರತಿವಾದಿಯಾಗಿರುವ ಪ್ರತ್ಯರ್ಜಿದಾರರು ತಮ್ಮ ಸಾಮಾನ್ಯ ಮುಖ್ತ್ಯಾರನಾಮೆಯ ಧಾರಕರಾಗಿರುವ ಶ್ರೀಯುತ ಎಸ್.ಕೆ. ಸೀತಾರಾಮರನ್ನು ಡಿಡಬ್ಲ್ಯು .1 ರಂದು

ವಿಚಾರಣೆ ಮಾಡಿರುತ್ತಾರೆ.ಶ್ರೀಯುತ ನಾರಾಯಣ ಎಂಬುವವರನ್ನು ಡಿಡಬ್ಲ್ಯು .2 ಎಂದು ವಿಚಾರಣೆ ಮಾಡಲಾಗಿದೆ; ಅರ್ಜಿದಾರರ ತಂದೆ-ತಾಯಿಯರನ್ನು ಡಿಡಬ್ಲ್ಯು .3 ಹಾಗೂ 4 ಎಂದು ವಿಚಾರಣೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಸಮನು ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರತ್ಯರ್ಜಿದಾರರ ಕೋರಿಕೆಯನ್ನುದಿನಾಂಕ: 18.2.2019 ರ ಆದೇಶದ ಮೇರೆಗೆ ಮಾನ್ಯ ಅಧಿವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ಅಂಗೀಕರಿಸಿರುತ್ತಾರೆ.

(ಡಿ) ಪ್ರಧಾನವಾಗಿ ಅರ್ಜಿದಾರರ ತಾಯಿ ಡಾ || ಎಸ್.ಕೆ. ವಸುಂಧರಾ ದೇವಿಯವರನ್ನು ಡಿಡಬ್ಲ್ಯು..3 ಎಂದು ಎ ಂ ದು ಹಾಗೂ ಅರ್ಜಿದಾರರ ತ ಂ ದೆ ಪ್ರೊ. ಆರ್.ಕೆ. ವಿಜಯಸಾರಥಿಯವರನ್ನು ಡಿಡಬ್ಲ್ಯು .4 ಎಂದು ವಿಚಾರಣೆ ಮಾಡಲಾಗಿರುತ್ತದೆ; ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಪ್ರಶ್ನಿತ ಆದೇಶದ ಮೂಲಕ ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿದ್ದು, ಅವರು ಪಾಟೀ ಸವಾಲು ನಡೆಸಲು ಪ್ರತ್ಯರ್ಜಿದಾರರಿಗೆ ಅನುಮತಿ ನೀಡಿರುತ್ತಾರೆ; ಇದರಿಂದ ಬಾಧಿತರಾಗಿರುವವರು ಈ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.

3. ಅರ್ಜಿದಾರ-ವಾದಿಯ ನಿವೇದನೆ:

(ಎ) ಅರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀ ಜಯಕುಮಾರ್ ಎಸ್. ಪಾಟೀಲ್ ರವರು ಶಿವಮೂರ್ತಿ ಸ್ವಾಮಿ -ವಿರುದ್ಧ-ಅಗೋಡಿ ಸಂಗನೆ, ಎಐಆರ್ 1969 ಕೆಎಆರ್ 12 ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿ, ಯುಕ್ತ ಸಂದರ್ಭದಲ್ಲಿ ಸಿವಿಲ್ ನ್ಯಾಯಾಲಯವು ಪಕ್ಷಕಾರರ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ, ಅವರನ್ನು ಪಾಟಿ ಸವಾಲು ಮಾಡಲು ಅನುಮತಿಸಬಹುದಾಗಿದ್ದರೂ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಡಿಡಬ್ಲ್ಯು 3 ಹಾಗೂ 4 ರವರುಗಳನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ, ಆ ಮೂಲಕ ಮೇಲೆ ನಮೂದಿಸಲಾದ ಕ್ರಿಮಿನಲ್ ಪ್ರಕರಣದ ಅರ್ಜಿದಾರರ ವಿರುದ್ಧ ಸದರಿ ಸಾಕ್ಷಿದಾರರು ಪ್ರತಿಕೂಲವಾಗಿ ಹೇಳಿಕೆ ನೀಡಿದ್ದ ವಿಷಯ ಪ್ರತ್ಯರ್ಜಿದಾರಳಿಗೆ ತಿಳಿದಿತ್ತು ಎಂಬ ಮಟ್ಟಿಗೆ ಆತ ಅವರ ಪಾಟೀಸವಾಲನ್ನು ಮಾಡಲು ಅನುಮತಿ ನೀಡಿರುವುದು ಸಮರ್ಥನೀಯವಾಗಿರುವುದಿಲ್ಲ; ಒಮ್ಮೆ ಅವರುಗಳನ್ನು ಆಕೆಯ ಕಡೆಯಿಂದ ಸಾಕ್ಷಿದಾರರೆಂದು ವಿಚಾರಣೆಗೊಳಪಡಿಸಿದ ಮೇಲೆ, ಪ್ರತ್ಯರ್ಜಿದಾರಳು ತಿರುಚುವಂತಿಲ್ಲ ಹಾಗೂ ಅವರನ್ನು ಪಾಟಿ ಸವಾಲು ಮಾಡಬಹುದಾದ ಹಾಗೆ ಪ್ರತಿಕೂಲ ಸಾಕ್ಷಿಯೆಂದು ಅವರನ್ನು ಪರಿಗಣಿಸಲು ಕೋರುವಂತಿಲ್ಲ ಎಂದು ವಾದಿಸಿರುತ್ತಾರೆ.

(ಬಿ) ದಾವೆಯ ಪಕ್ಷಕಾರರು, ತನ್ನ ವಾದದ ಹೇಳಿಕೆಗಳಿಗೆ ಪೂರಕವಾಗಿರಬೇಕೆಂಬ ಪೂರ್ವಭಾವನೆಯಿಂದ ಕೆಲವು ವ್ಯಕ್ತಿಗಳನ್ನು ತನ್ನ ಸಾಕ್ಷಿದಾರರೆಂಬುದಾಗಿ ಆಯ್ಕೆ ಮಾಡಿಕೊಂಡಿದ್ದಾರೆ.ಆದಾಗ್ಯೂ, ಕೆಲವೊಮ್ಮೆ ಆತನ ಸಾಕ್ಷಿದಾರರು ಸಾಕ್ಷ್ಯ ನೀಡುವಾಗ ಅಂಥ ಪಕ್ಷಕಾರನ ಹಿತಾಸಕ್ತಿಗೆ ಪ್ರತಿಕೂಲವಾಗಿ ಸತ್ಯವು ಹೊರಬೀಳುತ್ತದೆ.ಆದುದರಿಂದ ಸದರಿ ಸಾಕ್ಷ್ಯಗಳನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸುವುದು ಸಮರ್ಥನೀಯವಾಗಿರುವುದಿಲ್ಲ; ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಪಕ್ಷಕಾರನು ಸತ್ಯವನ್ನು ಹೊರಗೆಳೆಯುವುದಕ್ಕಾಗಿ ತನ್ನ ಸಾಕ್ಷಿದಾರನನ್ನು ಕರೆದು ಪಾಟಿ ಸವಾಲನ್ನು ಮಾಡಲು ಅನುಮತಿ ನೀಡುವ ನೀಡುವ ಹಾಗೆ ಹಾಗೆ ಸಾಕ್ಷಿಯನ್ನು ಪ್ರತಿಕೂಲವೆಂದು ಸಾಬೀತುಪಡಿಸಲು ಇನ್ನೂ ಹೆಚ್ಚಿನ ಆಧಾರಗಳು ಅಗತ್ಯವಾಗಿರುತ್ತದೆ;

(ಸಿ) ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಸಾಕ್ಷ್ಯವನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸುವ ವಿಷಯದಲ್ಲಿ ಅರ್ಜಿದಾರರು ಏನನ್ನೂ ಹೇಳುವುದಿಲ್ಲವೆಂದು ಹಾಗೂ ಇದು ನ್ಯಾಯಾಲಯ ಹಾಗೂ ಸಾಕ್ಷ್ಯವನ್ನು ತನ್ನ ಪರವಾಗಿ ಕರೆಯುವ ಪಕ್ಷಕಾರನ ನಡುವಿನ ವಿಚಾರವೆಂದು ಅಭಿಪ್ರಾಯಪಟ್ಟಿರುವುದು ಸಮರ್ಥನೀಯವಾಗಿರುವುದಿಲ್ಲ; ಅಂಥ ನಿರ್ಣಯವು ದಾವೆಯಲ್ಲಿನ ತನ್ನ ನಿಲುವಿಗೆ ಸಂಬಂಧಿಸಿರುವ ಮಟ್ಟಿಗೆ ಅಧಿವಿಚಾರಣಾ ನ್ಯಾಯಾಲಯವು ನೀಡಿದ ಅಂಥ ನಿರ್ಣಯದಲ್ಲಿ ಅರ್ಜಿದಾರರು ಕಾನೂನುಸಮ್ಮತ ಹಿತಾಸಕ್ತಿಯನ್ನು ಹೊಂದಿದ್ದರು; ಹಾಗಾಗಿ, ಪ್ರಶ್ನಿತ ಆದೇಶವು ತೀರ್ಮಾನವನ್ನು ಕೊಡುವ ಮುಂಚೆ ಉಭಯ ಪಕ್ಷಕಾರರ ಅಹವಾಲನ್ನು ಆಲಿಸಬೇಕೆಂಬ ಸ್ವಾಭಾವಿಕ ನ್ಯಾಯದ ತತ್ವವನ್ನೇ ಉಲ್ಲಂಘಿಸಿದೆ.

4. ಪ್ರತ್ಯರ್ಜಿದಾರ-ಪ್ರತಿವಾದಿಯ ನಿವೇದನೆ:

(ಎ) ಹಿಂದಿನ ವಾದಕ್ಕೆ ಪ್ರತಿಯಾಗಿ, ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀಯುತ ಆರ್. ಅಭಿನವ್ರವರು, ಗುರ ಸಿಂಗ್ -ವಿರುದ್ಧ ರಾಜಸ್ಥಾನ ಸರ್ಕಾರ್, ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸುತ್ತಾ, ದಾವೆಯ ಪಕ್ಷಕಾರನು ತನ್ನ ಸಾಕ್ಷಿದಾರನಾಗಿ ಯಾರೇ ವ್ಯಕ್ತಿಯನ್ನು ಕರೆಯಲು ಮುಕ್ತನಾಗಿರುತ್ತಾನೆ; ಅಂಥ ಸಾಕ್ಷಿದಾರನು ಮುಖ್ಯ ವಿಚಾರಣೆಯ ಸಮಯದಲ್ಲಿ ಮೇಲ್ನೋಟಕ್ಕೆ ಪ್ರತಿಕೂಲವೆಂದು ತೋರಿದರೆ, ತನ್ನನ್ನು ಕರೆದ ವ್ಯಕ್ತಿಯ ಹಿತಾಸಕ್ತಿಗೆ ಪೂರಕವಾದ ಪೂರ್ವ ನಿರ್ಧರಿತ ಉದ್ದೇಶದೊಂದಿಗೆ, ಅಧಿವಿಚಾರಣಾ ನ್ಯಾಯಾಧೀಶರು, ತಮ್ಮ ವಿವೇಚನೆ ಹಾಗೂ ವಿವೇಕಾನುಸಾರ, ಅಂಥ ಸಾಕ್ಷ್ಯವನ್ನು ಪ್ರತಿಕೂಲ ಸಾಕ್ಷಿಯೆಂದೇ ಪರಿಗಣಿಸುವ ಕೋರಿಕೆಯನ್ನು ಸಮ್ಮತಿಸಬಹುದಾಗಿರುತ್ತದೆ ಹಾಗೂ ಆ ಮೂಲಕ ಸತ್ಯವನ್ನು ಹೊರಗೆಳೆಯುವ ಉದ್ದೇಶಕ್ಕಾಗಿ ಅಥವಾ ಆತನ ಪ್ರತಿಕೂಲ ಹೇಳಿಕೆಯನ್ನು ನಿರಾಕರಿಸುವುದಕ್ಕಾಗಿ ಸಂಬಂಧಿಸಿದಂತೆ ಆತನನ್ನು ಪಾಟೀ ಸವಾಲು ಮಾಡಲು ಪಕ್ಷಕಾರನಿಗೆ ಅನುಮತಿ ನೀಡಬಹುದಾಗಿರುತ್ತದೆ.

(ಬಿ) ಸರ್ವೋಚ್ಚ ನ್ಯಾಯಾಲಯವು, ಭಾರತ ಸಾಕ್ಷ್ಯ ಎಲಾ ಅಧಿನಿಯಮ, 1872 ರ 154 ಹಾಗೂ 155 ನೇ ಪ್ರಕರಣಗಳ ಉಪಬಂಧವನ್ನು ವ್ಯಾಖ್ಯಾನಿಸುತ್ತಾ, ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರಂತೆ ಪರಿಗಣಿಸುವ ವಿಷಯದಲ್ಲಿ ಇಂಗ್ಲಿಷರ ಸಾಕ್ಷ್ಯದ ಕಾನೂನಿನ ಸದೃಶ ಸಂಗತಿಗಳಲ್ಲಿ ಪಡೆದುಕೊಂಡಿರುವ ಕಾಲ ಪರಿಮಿತಿಯು ಭಾರತದ ಸಾಕ್ಷ್ಯ ಕಾನೂನುಗಳಲ್ಲಿ ಸುಸ್ಪಷ್ಟವಾಗಿ ಇಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಆದ್ದರಿಂದ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ತಮ್ಮ ಯುಕ್ತ ವಿವೇಚನಾಧಿಕಾರವನ್ನು ಚಲಾಯಿಸಿ ನೀಡಿರುವ ಪ್ರಶ್ನಿತ ಆದೇಶವು, ರಿಟ್ ನ್ಯಾಯಾಲಯದ ಕೈಯಲ್ಲಿ ಸಮರ್ಥನೀಯವಾಗಿರುವುದಿಲ್ಲ; ಹಾಗೂ

(ಸಿ) ಪ್ರತಿಕೂಲ ಸಾಕ್ಷ್ಯಗಳನ್ನು ಹೇಗೆ ನೀಡಬೇಕೆಂದು ಕಾನೂನು ಅನ್ಯಥಾ ಇತ್ಯರ್ಥಪಡಿಸಿದ್ದರೂ, ಅರ್ಜಿದಾರರಿಗೆ ಪ್ರಶ್ನಿತ ಆದೇಶದ ಮೂಲಕ ಯಾವುದೇ ಬಾಧಕವುಂಟಾಗುವಂತಿರುವುದಿಲ್ಲ.ಆದ್ದರಿಂದ, ಇದರಲ್ಲಿರುವ ವಾದ ಮಾಡಬಹುದಾದ ರೀತಿಯಲ್ಲಿ ಇಲ್ಲದಿರುವುದನ್ನು ಪರಿಗಣಿಸದೆ, ಮಧ್ಯಪ್ರವೇಶಿಸುವುದಕ್ಕೆ ಸಂಬಂಧಿಸಿದ ಮನವಿಯು ಅರ್ಥಶೂನ್ಯವಾಗಿರುವುದರಿಂದ ಈ ನ್ಯಾಯಾಲಯವು ಈ ವಿಷಯದಲ್ಲಿ ಮಧ್ಯಪ್ರವೇಶಿಸಬಾರದು.

5. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿ, ಅರ್ಜಿಗಳನ್ನು ಪರಿಶೀಲಿಸಿ, ಅರ್ಜಿದಾರರಿಗೆ ಯಾವುದೇ ತಾತ್ಕಾಲಿಕ ತಡೆಯನ್ನು ನೀಡಲಾಗುವುದಿಲ್ಲ ಏಕೆಂದರೆ:

(i) ಭಾರತದಲ್ಲಿ ಪ್ರತಿಕೂಲ ಸಾಕ್ಷ್ಯಕ್ಕೆ ಸಂಬಂಧಿಸಿದ ಕಾನೂನನ್ನು ಹಲವಾರು ಉಚ್ಚ ನ್ಯಾಯಾಲಯಗಳು ಪರಿಭಾಷಿಸಿರುವಂತೆ ಶಾಸನಾತ್ಮಕ ಉಪಬಂಧಗಳ ಚ ಮೂಲಕ ವಿಸ್ತೃತವಾಗಿ ನಿರೂಪಿಸಲಾಗಿದೆ; ಭಾರತ ಸಾಕ್ಷ್ಯ ಎ ಅಧಿನಿಯಮ, 1872 ರ 154 ನೇ ಪ್ರಕರಣವು, ಒಬ್ಬ ಪಕ್ಷಕಾರನು ತನ್ನ ಸ್ವಂತ ಸಾಕ್ಷಿದಾರನಿಗೆ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕಲ್ಪಿಸುತ್ತದೆ.ಈ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

" ಪ್ರ .154.ಪಕ್ಷಕಾರನು ತನ್ನ ಸಾಕ್ಷಿಯನ್ನೇ ಪ್ರಶ್ನಿಸುವುದು.( 1) ಸಾಕ್ಷಿಯನ್ನು ಕರೆಸುವ ಯಾರೇ ವ್ಯಕ್ತಿಗೆ, ಎದುರು ಪಕ್ಷಕಾರನು, ಪಾಟೀಸವಾಲಿನಲ್ಲಿ ಅವನಿಗೆ ಕೇಳಬಹುದಾದ ಯಾವುದೇ ಪ್ರಶ್ನೆಗಳನ್ನು ಆ ಸಾಕ್ಷಿಗೆ ಕೇಳಲು ನ್ಯಾಯಾಲಯವು, ತನ್ನ ವಿವೇಚನಾನುಸಾರ ಅವಕಾಶ ಕೊಡಬಹುದು.

(2) ಈ ಪ್ರಕರಣದಲ್ಲಿರುವುದಾವುದೂ, ( 1) ನೇ ಉಪ ಪ್ರಕರಣದಡಿಯಲ್ಲಿ ಹಾಗೆ ಮಾಡಲು ಅನುಮತಿಸಿದ ವ್ಯಕ್ತಿಯು ಅಂಥ ಸಾಕ್ಷ್ಯದಾರನ ಸಾಕ್ಷ್ಯದ ಯಾವುದೇ ಭಾಗದ ಮೇಲೆ ಅವಲ ಂ ಬಿಸುವ ಅವಕಾಶವನ್ನು ಕಸಿದುಕೊಳ್ಳತಕ್ಕದ್ದಲ್ಲ.

ಈ ಉಪಬಂಧವು, ಪಕ್ಷಕಾರನಿಗೆ, ನ್ಯಾಯಾಲಯದ ಅನುಮತಿಯೊಂದಿಗೆ, ಎದುರು ಪಕ್ಷಕಾರನು ಪಾಟೀ ಸವಾಲಿನಲ್ಲಿ ಮಾಡಿದಂತಹ ವಿಧಾನದಲ್ಲಿಯೇ ತನ್ನ ಸ್ವಂತ ಸಾಕ್ಷಿದಾರನಿಗೂ ಪ್ರಶ್ನೆಗಳನ್ನು ಕೇಳುವ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ ಅವಕಾಶ ಕಲ್ಪಿಸುತ್ತದೆ.ಅಂತಹ ಸಾಕ್ಷಿದಾರನಿಗೆ ಪ್ರಮುಖ ಪ್ರಶ್ನೆಗಳನ್ನು (ಪ್ರಕರಣ 143), ಲಿಖಿತದಲ್ಲಿನ ಆತನ ಹಿಂದಿನ ಹೇಳಿಕೆಗೆ ಸಂಬಂಧಿಸಿದ ಪ್ರಶ್ನೆಗಳನ್ನು (ಪ್ರಕರಣ 145) ಹಾಗೂ ಆತನ ಸತ್ಯತೆಯನ್ನು ಪರೀಕ್ಷಿಸುವ, ಆತ ಯಾರು ಹಾಗೂ ಜೀವನದಲ್ಲಿ ಆತನ ಸ್ಥಾನವೇನು ಎಂಬುದನ್ನು ಕಂಡುಹಿಡಿಯುವ ಅಥವಾ ಆತನ ಶೀಲಕ್ಕೆ ಕುಂದುಂಟುಮಾಡುವ ಮೂಲಕ ಆತನ ವಿಶ್ವಾಸಾರ್ಹತೆಗೆ ಧಕ್ಕೆಯುಂಟು ಮಾಡುವ ಪ್ರಶ್ನೆಗಳನ್ನು (146) ಕೇಳಬಹುದು.ಆದಾಗ್ಯೂ, ಸಾಕ್ಷ್ಯದ ಇಂಗ್ಲಿಷ್ ಕಾನೂನಿನಡಿಯಲ್ಲಿ, ಪಕ್ಷಕಾರನಿಗೆ ಈ ಮೊದಲ ಅಪರಾಧ ನಿರ್ಣಯ ಅಥವಾ ಅಂಥಹುದೇ ಆತನ ದುಶ್ಚಾರಿತ್ರ್ಯ ಅಥವಾ ಸಂಶಯಾಸ್ಪದ ಪೂರ್ವ ವೃತ್ತಾಂತಗಳ ಸಾಮಾನ್ಯ ಸಾಕ್ಷ್ಯದ ಮೂಲಕ ಆತನ ಸ್ವಂತ ಸಾಕ್ಷ್ಯದ ವಿಶ್ವಾಸಾರ್ಹತೆಗೆ ಧಕ್ಕೆ ತರಲು ಅನುಮತಿ ಇರುವುದಿಲ್ಲ; ಭಾರತದಲ್ಲಿ, ಅಧಿನಿಯಮದ 155 ನೇ ಪ್ರಕರಣದಡಿಯಲ್ಲಿ ನ್ಯಾಯಾಲಯದ ಅನುಮತಿಯೊಂದಿಗೆ ಹೀಗೆ ಪ್ರಶ್ನೆಗಳನ್ನು ಕೇಳಬಹುದಾಗಿದ್ದು, ಅದು ಈ ಮುಂದಿನಂತಿರುತ್ತದೆ:

" ಪ್ರ. 155.ಸಾಕ್ಷಿಯ ವಿಶ್ವಾಸಾರ್ಹತೆಗೆ ಧಕ್ಕೆ ತರುವುದು.ಎದುರು ಪಕ್ಷಕಾರನು, ಅಥವಾ ಅವನನ್ನು ಸಾಕ್ಷಿಯನ್ನಾಗಿ ಕರೆಯುವ ಪಕ್ಷಕಾರನು ನ್ಯಾಯಾಲಯದ ಸಮ್ಮತಿ ಪಡೆದು, ಒಬ್ಬ ಸಾಕ್ಷಿಯ ವಿಶ್ವಾಸಾರ್ಹತೆಗೆ ಈ ಕೆಳಕಂಡ ರೀತಿಯಲ್ಲಿ ಧಕ್ಕೆ ತರಬಹುದು.

(1) ಸಾಕ್ಷಿಯ ಬಗ್ಗೆ ತಮಗೆ ಗೊತ್ತಿರುವುದರಿಂದ ಅವನು ಗ ವಿಶ್ವಾಸಾರ್ಹನಲ್ಲವೆಂದು ತಾವು ನಂಬುವುದಾಗಿ ಪರಿ ಸಾಕ್ಷ್ಯ ಎಫ್ ಕೊಡುವ ವ್ಯಕ್ತಿಗಳ ಸಾಕ್ಷ್ಯದ ಮೂಲಕ;

(2) ಸಾಕ್ಷಿಯು ತನ್ನ ಸಾಕ್ಷ್ಯವನ್ನು ಕೊಡಲು ಲ ಂ ಚ ತೆಗೆದುಕೊಂಡಿದ್ದಾನೆಂಬುದನ್ನು ಅಥವಾ ಲಂಚ ಕೊಡುತ್ತೇವೆಂಬುದನ್ನು ಒಪ್ಪಿಕೊಂಡಿದ್ದಾನೆ ಂ ಬುದನ್ನು ಅಥವಾ ಬೇರಾವುದೋ ಭ್ರಷ್ಟ ಪ್ರೇರಣೆಯನ್ನು ಪಡೆದಿದ್ದಾನೆಂಬುದನ್ನು ಸಾಬೀತು ಮಾಡುವ ಮೂಲಕ;

(3) ಖಂಡಿಸಬಹುದಾದ ಅವನ ಸಾಕ್ಷ್ಯದ ಯಾವುದೇ ಭಾಗಕ್ಕೆ ಅಸಂಗತವಾಗಿರುವ ಹಿಂದಿನ ಹೇಳಿಕೆಗಳನ್ನು ಸಾಬೀತು ಮಾಡುವ ಮೂಲಕ.99

ii) ಮೇಲೆ ಈಗಾಗಲೇ ನಮೂದಿಸಲಾದಂತೆ, 154 ನೇ ಪ್ರಕರಣವು, ಪಕ್ಷಕಾರನು ತನ್ನ ಸ್ವಂತ ಸಾಕ್ಷಿದಾರನಿಗೆ ಪ್ರಶ್ನೆಗಳನ್ನು ಕೇಳಲು ಅವಕಾಶ ಕಲ್ಪಿಸುತ್ತದೆ ಹಾಗೂ ಈ ಪ್ರಶ್ನೆಗಳು, ಎದುರು ಪಕ್ಷಕಾರರು ಪಾಟಿ ಸವಾಲಿನಲ್ಲಿ ಕೇಳಬಹುದಾದಂಥವಾಗಿರುತ್ತವೆ; ಆದಾಗ್ಯೂ, ಇದು ಕಟ್ಟುನಿಟ್ಟಾಗಿ ಸಾಕ್ಷಿದಾರನನ್ನು " ಪಾಟೀ ಸವಾಲು ' ಮಾಡುವುದಕ್ಕೆ ಖಂಡಿತವಾಗಿ ಸರಿ ಸಮಾನವಾಗಿರುವುದಿಲ್ಲ; ಪಾಟೀ ಸವಾಲು ಎಂದರೆ ಎದುರು ಪಕ್ಷಕಾರನು ಸಾಕ್ಷಿದಾರನನ್ನು ವಿಚಾರಣೆ ಮಾಡಿದ ಪಕ್ಷಕಾರನಿಗಿಂತ ಭಿನ್ನವಾಗಿ ಮಾಡಿದ ವಿಚಾರಣೆಯನ್ನು ಪಾಟಿ ಸವಾಲು ಎಂದು ಕರೆಯಬಹುದು.ಆದ್ದರಿಂದ, ಕಾನೂನಿನಲ್ಲಿ ಆತನನ್ನು ಪಕ್ಷಕಾರನೇ ಕರೆದಿರಲಿ ಅಥವಾ ಎದುರು ಪಕ್ಷಕಾರನೇ ಕರೆದಿರಲಿ, ಪ್ರಮುಲ್ಲ ಕುಮಾರ್ ಸರ್ಕಾರ್ -ವಿರುದ್ಧ ~ ಎಂಪರರ್ 3 ಮೊಕದ್ದಮೆಯ ಮೇರೆಗೆ ಅಂಥ ಸಾಕ್ಷಿದಾರನ ಹೇಳಿಕೆಯ ಯಾವುದೇ ಭಾಗದ ಮೇಲೆ ಅವಲಂಬಿಸುವುದರಿಂದ ಪ್ರತಿವಾದಿಸತಕ್ಕದ್ದಲ್ಲ.

(iii) ಪ್ರತಿಕೂಲ, ವ್ಯತಿರಿಕ್ತ, ಸಾಧಕವಲ್ಲದ ಅಥವಾ ಒಲ್ಲದ ಸಾಕ್ಷಿದಾರರು ಎಂಬ ಪದಗಳ ನೈಜ ಅರ್ಥಕ್ಕೆ ಸಂಬಂಧಿಸಿದಂತೆ ಇಂಗ್ಲೆಂಡಿನಲ್ಲಿ ವಿವಾದಾತ್ಮಕ ನ್ಯಾಯಿಕ ಅಭಿಪ್ರಾಯಗಳಿರುವುದರ ಹಿನ್ನೆಲೆಯಲ್ಲಿ, ಪ್ರಾರೂಪಣಾಕಾರರು ಭಾರತೀಯ ಅಧಿನಿಯಮ, 1872 ರಲ್ಲಿ ಪದಾವಳಿಗೆ ಅರ್ಥಗಳನ್ನು ಸಾಕ ಗೊತ್ತುಪಡಿಸಿರುವುದಿಲ್ಲ.ಸಾಮಾನ್ಯವಾಗಿ ಪಕ್ಷಕಾರನು ತನ್ನ ಸಾಕ್ಷಿದಾರನನ್ನು ಕರೆದಂತಹ ವ್ಯಕ್ತಿಯು, ವ್ಯವಹರಣೆಗಳಲ್ಲಿ ಪ್ರತಿಕೂಲವಾಗಿದ್ದರೆ ಹೇಗೋ ಹಾಗೆ ಆತನಿಗೆ ಪಾಟೀಸವಾಲಿಗೆ ಅನುಮತಿಸುವುದಿಲ್ಲವೆಂಬುದು ಇತ್ಯರ್ಥಗೊಂಡ ಕಾನೂನಿನ ತತ್ವವಾಗಿರುತ್ತದೆ; ಆದಾಗ್ಯೂ, 154 ಹಾಗೂ 155 ನೇ ಪ್ರಕರಣಗಳು ಈ ಸಾಮಾನ್ಯ ನಿಯಮಗಳ ಅಪವಾದದ ಸ್ವರೂಪದಲ್ಲಿವೆ; ಈ ಪ್ರಕರಣಗಳನ್ನು ಪ್ರಾಜ್ಞರ ದೀರ್ಘಾನುಭವದಿಂದ ಪಡೆದ ಜ್ಞಾನದ ಆಧಾರದ ಮೇಲೆ ರೂಪಿಸಲಾಗಿರುತ್ತದೆ; ಈ ಪ್ರಕರಣಗಳು ಸಾಮಾನ್ಯ ನಿಯಮದ ಸಡಿಲಿಕೆಗೆ ಸಂಬಂಧಿಸಿದಂತೆ ಉಪಬಂಧವನ್ನು ಕಲ್ಪಿಸಿದ್ದು, ಇದರಿಂದ ಪ್ರತಿಕೂಲ ಸಾಕ್ಷ್ಯದ ಪಾಟೀ ಸವಾಲಿನಿಂದ ಸತ್ಯವನ್ನು ಹೊರದೆಗೆಯಲಾಗುತ್ತದೆ; ಪ್ರಸ್ತುತ ಇದು, 154 ನೇ ಪ್ರಕರಣದ ವ್ಯಾಪ್ತಿಯು, ಮುಖ್ಯವಾದ ಪ್ರಶ್ನೆಗಳನ್ನು ಕೇಳಲು ಮಾತ್ರ ಸೀಮಿತವಾಗಿರದೆ, ಪಾಟಿ ಸವಾಲಿನ ಒಟ್ಟಾರೆ ವ್ಯಾಪಕತೆಗೆ ವಿಸ್ತೃತವಾಗುತ್ತದೆಂಬುದನ್ನು ಸುಸ್ಥಾಪಿಸುತ್ತದೆ.

(iv) ನ್ಯಾಯಾಲಯವು ತನ್ನ ವಿವೇಚನಾನುಸಾರ ನೀಡಿದ ಅನುಮತಿಯನ್ನು ಹೊರತುಪಡಿಸಿದಂತೆ ಒಬ್ಬ ಪಕ್ಷಕಾರನಿಗೆ ತನ್ನ ಸ್ವಂತ ಸಾಕ್ಷಿದಾರರಿಗೆ ಮುಖ್ಯ ಪ್ರಶ್ನೆಗಳನ್ನು (ಪಾಟೀ ಸವಾಲನ್ನು ಕೇಳಲು ಸಾಮಾನ್ಯವಾಗಿ ಅನುಮತಿಸಲಾಗುವುದಿಲ್ಲ; ವಿವೇಚನೆಯು ಯುಕ್ತ ಹಾಗೂ ನ್ಯಾಯದ ನಿಯಮಗಳಿಗನುಸಾರವಾಗಿರುತ್ತದೆಂಬುದು ಸತ್ಯವಾದುದಾಗಿರುತ್ತದೆ.ವಿವೇಚನೆಯ ಬಳಕೆಯು ಪ್ರತಿ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಅವಲಂಬಿಸಿರುತ್ತವೆ; ನ್ಯಾಯಾಲಯವು ಸಾಕ್ಷ್ಯವನ್ನು ಪ್ರತಿಕೂಲವೆಂದು ಘೋಷಿಸುವುದಕ್ಕೆ ಮೊದಲು ಹಾಗೂ ಪಕ್ಷಕಾರನಿಗೆ ತನ್ನ ಸ್ವಂತ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಅವನಿಗೆ ಅನುಮತಿ ನೀಡುವುದಕ್ಕೆ ಮೊದಲು, ಸಾಕ್ಷಿದಾರನು ತನ್ನ ಮೊದಲಿನ ಹೇಳಿಕೆಯಿಂದ ಸಮರ್ಥಿಸಲು ಸಾಧ್ಯವಾಗದೆ ಹಿಂದೆ ಸರಿದಿರುತ್ತಾನೆಂದು, ಅಥವಾ ಉದ್ದೇಶಪೂರ್ವಕವಾಗಿ ಸತ್ಯವನ್ನು ಮಾತನಾಡುತ್ತಿಲ್ಲವೆಂದು ಅಥವಾ ದ್ವೇಷದ ಅಂಶಗಳನ್ನು ಪ್ರದರ್ಶಿಸಿದ್ದಾನೆಂದು ಅಥವಾ ಮೇಲ್ನೋಟಕ್ಕೆ ಪಕ್ಷಗಳನ್ನು ಬದಲಾಯಿಸಿದ್ದಾನೆಂದು ಸಾಬೀತುಪಡಿಸಲು ಸ್ವಲ್ಪ ಮಟ್ಟಿನ ಸಾಕ್ಷ್ಯಾಧಾರಗಳು ಬೇಕಾಗಿರುತ್ತವೆ;

ಕಟಕಟೆಯಲ್ಲಿರುವ ಸಾಕ್ಷೀದಾರನ ನಡವಳಿಕೆಯೂ ಸಹ ಸೂಕ್ತ ಅಂಶಗಳಲ್ಲಿ ಒಂದಾಗಿರುತ್ತದೆ; ಸಾಕ್ಷ್ಯವನ್ನು ದಾಖಲಿಸುವ ನ್ಯಾಯಾಲಯವು ಸಹ ಸಮರ್ಥನೀಯವಾದ ಸಾಮಾನ್ಯ ಪ್ರಶ್ನೆಯನ್ನು ಹಾಗೂ ವಿವೇಚನೆಯನ್ನು ಬಳಸುವಾಗ ದೂರದೃಷ್ಟಿಯನ್ನು ಇಟ್ಟುಕೊಳ್ಳಬೇಕಾಗಿರುತ್ತದೆ; ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ನೀಡಿರುವ ಅನುಮತಿಯನ್ನು ಕೇವಲ ಅಪನಂಬಿಕೆಗಾಗಿ ನೀಡಲಾಗಿರುವುದಿಲ್ಲ ಎಂಬುದನ್ನು ಇಲ್ಲಿ ಪ್ರತ್ಯೇಕವಾಗಿ ಹೇಳುವ ಅವಶ್ಯಕತೆಯಿರುವುದಿಲ್ಲ.

(   v) ಶ್ರೀಯುತ ಪಾಟೀಲ್ರವರ ವಾದವೇನೆಂದರೆ, ದೇಶದ ಅತ್ಯುನ್ನತ ನ್ಯಾಯಾಲಯದ ಮಟ್ಟದವರೆಗೆ ಒಂದು ಕ್ರಿಮಿನಲ್ ಪ್ರಕರಣವನ್ನು ಕೊಂಡೊಯ್ದು ಹೋರಾಟ ನಡೆಸುತ್ತಿರುವ ಕಾರಣ ಅರ್ಜಿದಾರರ ತಂದೆ-ತಾಯಿಯ ಹಾಗೂ ಆಕೆಯ ನಡುವೆ ವೈಷಮ್ಯವಿರುವುದು ಪ್ರತ್ಯರ್ಜಿದಾರನಿಗೆ ಆರಂಭದಿಂದಲೂ ತಿಳಿದಿತ್ತೆಂದೂ, ಹೀಗಿದ್ದಾಗ್ಯೂ, ಆತ ತಂದೆ-ತಾಯಿಯರನ್ನು ತನ್ನ ಸಾಕ್ಷಿದಾರರಂತೆ ವಿಚಾರಣೆ ಮಾಡಲು ಆಯ್ಕೆ ಮಾಡಿಕೊಂಡಿರುತ್ತಾನೆಂದೂ, ಆದ್ದರಿಂದ ನ್ಯಾಯಾಲಯವು ಅವರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಅನುಮತಿ ನೀಡಬಾರದು ಎಂಬುದಕ್ಕೆ ಒಪ್ಪಿಗೆ ಕೊಡುವುದು ಸ್ವಲ್ಪ ಕಷ್ಟವೇ; ಪಕ್ಷಕಾರರ ನಡುವೆ ವೈಷಮ್ಯವಿತ್ತು ಎಂಬುದು ನಿರ್ವಿವಾದ.ಅಲ್ಲದೆ ಪ್ರತ್ಯರ್ಜಿದಾರ ಹಾಗೂ ಅರ್ಜಿದಾರರ ತಂದೆ-ತಾಯಿಯರ ನಡುವೆ ವೈಷಮ್ಯವಿತ್ತು ಎಂಬುದೂ ನಿರ್ವಿವಾದ.ಆದುದರಿಂದ, ಪ್ರಶ್ನಿತ ಆದೇಶವನ್ನು ಅಸಿಂಧುಗೊಳಿಸುವುದಕ್ಕಾಗಿಯೇ ಅದನ್ನು ಪಡೆಯಲು ಸಾಧ್ಯವಾಗುವುದಿಲ್ಲ; ಸಾಕ್ಷ್ಯದ ಇಂಗ್ಲಿಷ್ ಕಾನೂನು ಕುರಿತಂತೆ ಅಧಿಕೃತವಾಗಿ ಮಾತನಾಡಬಲ್ಲ ಟೈಲರ್ರವರು ಹೇಳಿರುವುದನ್ನು ಇದರಲ್ಲಿ ಭಾರತೀಯ ಕಾನೂನಿಗೂ ಸಹ ಸಮಾನವಾಗಿ ಈ ಮುಂದಿನಂತೆ ಅನ್ವಯವಾಗುತ್ತದೆ.

" ಕೆಲವೊಮ್ಮೆ, ನ್ಯಾಯಾಧೀಶನು ತನ್ನ ವಿವೇಚನಾನುಸಾರ ನೇರ ವಿಚಾರಣೆಯಲ್ಲಿ ಕೇಳಬೇಕಾದ ಮುಖ್ಯ ಪ್ರಶ್ನೆಗೆ ಎಂದರೆ, ಉದಾಹರಣೆಗೆ, ಸಾಕ್ಷಿದಾರನು, ಸಾಕ್ಷಿ ಹೇಳುವ ಕಟಕಟೆಯಲ್ಲಿ ತನ್ನ ನಡವಳಿಕೆಯಿಂದ ತನ್ನನ್ನು ಹಾಜರುಪಡಿಸಿರುವ ಪಕ್ಷಕಾರನಿಗೆ ನಿಸ್ಸಂದೇಹವಾಗಿ ಪ್ರತಿಕೂಲವಾಗಿರುವುದು ಕಂಡುಬಂದಲ್ಲಿ, ಅಥವಾ ಇತರೇ ಪಕ್ಷಕಾರನಿಗೆ ಸಂಬಂಧಿಸಿದಂತೆ ಹಿತಾಸಕ್ತಿಯುಳ್ಳವನಂತೆ ಕಂಡುಬಂದಲ್ಲಿ ಅಥವಾ ಸಾಕ್ಷ್ಯವನ್ನು ನೀಡುವುದು ಇಷ್ಟವಿಲ್ಲವೆಂದು ಕಂಡುಬಂದಲ್ಲಿ ಅಥವಾ ವಿಶೇಷ ಸಂದರ್ಭಗಳು ಪಕ್ಷಕಾರನ ಸಾಕ್ಷಿಗಿಂತ ನ್ಯಾಯಾಲಯದ ಸಾಕ್ಷ್ಯವನ್ನು ನಿರೂಪಿಸುವಂತಹ ಸಂದರ್ಭಗಳಲ್ಲಿ ಮುಖ್ಯ ಪ್ರಶ್ನೆಗೆ ಅನುಮತಿ ನೀಡಬಹುದು.ವ್ಯಾಜ್ಯಕಾರನನ್ನು ಎದುರು ಪಕ್ಷಕಾರನು ಸಾಕ್ಷಿಯೆಂದು ಕರೆದಿರುವಲ್ಲಿ ಎದುರು ಪಕ್ಷಕಾರನು, ಅವನನ್ನು ಪ್ರತಿಕೂಲ ಸಾಕ್ಷಿದಾರನಾಗಿ ಪಾಟೀ ಸವಾಲು ಮಾಡುವ ಹಕ್ಕಿನ ವಿಷಯಕ್ಕೆ ತರುವಾಯ ಹಕ್ಕುಳ್ಳವನಾಗಿರುವುದಿಲ್ಲ.

(ಹಲ್ಸ್ ಬರೀಸ್ ಲಾಸ್ ಆಫ್ ಇಂಗ್ಲೆಂಡ್:ಸಂಪುಟ .15, 3 ನೇ ಆವೃತ್ತಿ, ಕಂಡಿಕೆ 805-806)

ಇಲ್ಲಿ ಮತ್ತೆ, ಅಧಿವಿಚಾರಣಾ ನ್ಯಾಯಾಧೀಶರು, ತುಂಬಾ ಜಾಣ್ಮೆಯ ಹಾಗೂ ಸ್ಥಿತಪ್ರಜ್ಞೆಯುಳ್ಳ ಸಾಕ್ಷಿದಾರನು ತನ್ನ ನೈಜ ಭಾವನೆಗಳು ಅಥವಾ ಪ್ರತಿಕೂಲ ವರ್ತನೆಯನ್ನು ಬಚ್ಚಿಟ್ಟುಕೊಂಡು ಆತನಿಗೆ ತಿಳಿದ ವಾಸ್ತವಾಂಶಗಳಿಗೆ ಹಾಗೂ ಪಕ್ಷಕಾರರು ಏನನ್ನು ಹೇಳುತ್ತಾನೆಂದು ನಿರೀಕ್ಷಿಸಿ ಈತನನ್ನು ಕರೆದಿದ್ದನೋ ಅಂಥ ಅಂಶಗಳಿಗೆ ವಿರುದ್ಧವಾಗಿ ಅನನುಕೂಲ ಸಾಕ್ಷ್ಯವನ್ನು ನೀಡಬಹುದಾದ ಸಂಭಾವ್ಯತೆ ಇರುವುದರಿಂದ ಎಚ್ಚರಿಕೆಯಿಂದಿರಬೇಕಾಗುತ್ತದೆ.

(vi) ಅಯ್ಯರ್ ಹಾಗೂ ಅಯ್ಯರ್ ರವರು ತಮ್ಮ " ಆರ್ ಆಫ್ ಕ್ರಾಸ್ ಟ ಎಕ್ಸಾಮಿನೇಷನ್'ನ 10 ನೇ ಆವೃತ್ತಿ, ಯ ಲೆಕ್ಸಿಸ್ನೆಕ್ಸಿಸ್ 1381 ನೇ ಪುಟದಲ್ಲಿ ಈ ಮುಂದಿನಂತೆ ಬರೆದಿರುತ್ತಾರೆ:

66 " ಅನನುಕೂಲವಾದ ಸಾಕ್ಷ್ಯ ನೀಡಿದ ಮಾತ್ರಕ್ಕೆ, ಪಕ್ಷಕಾರನು ಏನನ್ನು ಹೇಳುತ್ತಾನೆಂದು ನಿರೀಕ್ಷಿಸಿ ಆತನನ್ನು ಕರೆದಿದ್ದನೋ ಆ ಅಂಶಗಳಿಗೆ ವಿರುದ್ದವಾಗಿರುವಂಥ ಸತ್ಯವನ್ನು ಆತನು ಹೇಳಿರಬಹುದಾದ ಕಾರಣಕ್ಕಾಗಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ.ಸತ್ಯವನ್ನು ಹೇಳುವುದರಿಂದ ನುಣಚಿಕೊಳ್ಳುವ ಅಥವಾ ಬಚ್ಚಿಡುವ ಮೂಲಕ ಪಕ್ಷಕಾರರ ಪ್ರಕರಣವನ್ನು ಹಾನಿಗೊಳಿಸಲು ಪ್ರಯತ್ನಿಸಿದಲ್ಲಿ, ಆತ ಪ್ರತಿಕೂಲ ಸಾಕ್ಷಿಯಾಗುತ್ತಾನೆ.ಈ ಪ್ರಕರಣದ ಮೂಲಕ ನ್ಯಾಯಾಲಯಕ್ಕೆ ತುಂಬಾ ವ್ಯಾಪಕ ವಿವೇಚನಾಧಿಕಾರವನ್ನು ನೀಡುವುದರಿಂದ, ಪಕ್ಷಕಾರನಿಗೆ ತನ್ನ ಸಾಕ್ಷ್ಯವನ್ನು ಪಾಟೀ ಸವಾಲು ಮಾಡಲು ಅನುಮತಿಸುವ ಅಧಿಕಾರವನ್ನು ಹೊಂದಿರುತ್ತದೆ.( i) ಸಾಕ್ಷಿಯ ಕಟಕಟೆಯಲ್ಲಿ ಆತನ ಮನಸ್ಥಿತಿ, ವರ್ತನೆ, ಚರ್ತಿ ಮತ್ತು ಸಹನೆಯು ಸ ಂ ದೇಹಕ್ಕೆಡೆ ಮಾಡಿಕೊಡುವಂತೆ ವಿರುದ್ದವಾದ ಭಾವನೆಗಳನ್ನು ತೋರಿಸಿದಾಗ, ಅಥವಾ ಆತನನ್ನು ಕರೆಸಿರುವ ಪಕ್ಷಕಾರನಿಗೆ ವಿರುದ್ದವಾದ ಮನಸ್ಥಿತಿಯನ್ನು ಹೊಂದಿರುವಾಗ, ಅಥವಾ(ii) ತನ್ನ ನೈಜ ಭಾವನೆಗಳನ್ನು ಬಚ್ಚಿಟ್ಟುಕೊಂಡು ಯಾವುದೇ ಪ್ರತಿಕೂಲ ಭಾವವನ್ನು ವ್ಯಕ್ತಪಡಿಸದಿದ್ದರೂ ತನಗೆ ತಿಳಿದುದಕ್ಕೆ ವಿರುದ್ದವಾಗಿ ಅಥವಾ ರುಜುವಾತುಪಡಿಸಲು ಕರೆಯಲಾಗಿರುವುದಕ್ಕೆ ವಿರುದ್ದವಾಗಿ ಅಥವಾ ಈ ಮೊದಲು ಉದ್ದೇಶಪೂರ್ವಕವಾಗಿ ಹೇಳಿದ್ದಕ್ಕೆ ವಿರುದ್ದವಾಗಿ ಮತ್ತು ಆತ ಸಾಕ್ಷ್ಯವನ್ನು ನೀಡುವ ವಿಧಾನ ಮತ್ತು ವರ್ತನೆಯ ಮೂಲಕ ಆತನು ಸತ್ಯವನ್ನು ಬಚ್ಚಿಡುತ್ತಿದ್ದಾನೆಂದು ಅಥವಾ ಯುಕ್ತವಾಗಿ ಸಾಕ್ಷ್ಯವನ್ನು ನೀಡುವ ಹಾಗೂ ಇತರೆ ಪಕ್ಷಕಾರನಿಗೆ ಸಹಾಯ ಮಾಡುವ ದೃಷ್ಟಿಯಿಂದ ನ್ಯಾಯಾಲಯಕ್ಕೆ ಸತ್ಯವನ್ನು ಹೇಳುವ ಅಪೇಕ್ಷೆ ಹೊಂದಿಲ್ಲವೆಂಬುದನ್ನು ತೋರಿಸಿದಾಗ; ತನ್ನ ಸಾಕ್ಷಿಯನ್ನು ಪಾಟೀಸವಾಲು ಮಾಡುವ ಸ್ವಾತಂತ್ರ್ಯ ನ್ಯಾಯಾಲಯಕ್ಕಿದೆ.ತನ್ನನ್ನು ಕರೆದ ಪಕ್ಷಕಾರನು ಸಾಕ್ಷಿಯ ಪಾಟೀ ಸವಾಲನ್ನು ಸಮರ್ಥಿಸುವ ಹಾಗೆ ಅವನು ಸ್ವತಃ ತನ್ನನ್ನು ಪ್ರತಿಕೂಲ ಸಾಕ್ಷಿಯೆಂದು ಬಿಂಬಿಸಿಕೊಳ್ಳುತ್ತಿದ್ದಾನೆಯೇ ಎಂಬುದು ಸ ಂ ಪೂರ್ಣವಾಗಿ ನ್ಯಾಯಾಧೀಶರ ವಿವೇಚನೆಗೆ ಬಿಟ್ಟ ವಿಷಯ.ಸಾಕ್ಷಿದಾರನು ಸತ್ಯವನ್ನು ಹೇಳುವಾಗ, ಆತನ ಸಾಕ್ಷ್ಯವು, ಆತನನ್ನು ಕರೆದ ಪಕ್ಷಕಾರನಿಗೆ ವಿರುದ್ದವಾಗಿ ಪರಿಣಮಿಸಿದಲ್ಲಿ ಸಾಕ್ಷಿದಾರನು ಅವಶ್ಯಕವಾಗಿ ಪ್ರತಿಕೂಲ ಸಾಕ್ಷಿಯಾಗಿರುವುದಿಲ್ಲ ಹಾಗೂ ಆತ ಪ್ರತಿಕೂಲ ಸಾಕ್ಷಿಯಾಗಿದ್ದಾನೆಂಬ ಸಂಗತಿಯನ್ನು ಪ್ರತಿಕೂಲತೆಯ ಸೂಚನೆಯನ್ನು ನೀಡಬಹುದಾದಂಥ ಮಾಹಿತಿಯನ್ನು ಹೊರತೆಗೆಯುವ ಮೂಲಕ ರುಜುವಾತು ಪಡಿಸಬೇಕಾಗುತ್ತದೆ.೨೨

(viii) ಈ ನ್ಯಾಯಾಲಯದ ಸಮನ್ವಯ ಪೀಠವು ಶಿವಮೂರ್ತಿ ಸ್ವಾಮಿ ಮೊಕದ್ದಮೆಯ (ಹಿಂದೆ ಹೇಳಿದ) 16, 17 ಹಾಗೂ 18 ನೇ ಕಂಡಿಕೆಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

"16. ಸಾಕ್ಷಿದಾರನನ್ನು ಕರೆಯುವ ಪಕ್ಷಕಾರನು, ಸಾಕ್ಷಿದಾರನು ವಿಶ್ವಾಸಾರ್ಹ ಸಾಕ್ಷಿದಾರನೆಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟನೆಂದು ಯುಕ್ತವಾಗಿ ಭಾವಿಸಬಹುದಾಗಿರುವ ಸಾಮಾನ್ಯ ಸಂದರ್ಭಗಳಲ್ಲಿ ಆತನ ಪ್ರಕರಣಕ್ಕೆ ಪ್ರತಿಕೂಲವಾಗುವ ಉತ್ತರವನ್ನು ಅನಿರೀಕ್ಷಿತವಾಗಿ ನೀಡಿದಾಗ ಮಾತ್ರ ಸಾಕ್ಷಿದಾರನನ್ನು ಕರೆದಿರುವ ಪಕ್ಷಕಾರನಿಗೆ ಸಾಕ್ಷ್ಯ ಅಧಿನಿಯಮದ 154 ನೇ ಪ್ರಕರಣದಡಿಯಲ್ಲಿ ಅನುಮತಿ ಕೋರುವ ಸಂದರ್ಭವು ಉದ್ಭವಿಸಬಹುದಾಗಿರುತ್ತದೆ.ಪಕ್ಷಕಾರನಿಗೆ ಸಾಕ್ಷಿದಾರನು ತನಗೆ ಪ್ರತಿಕೂಲ ಸಾಕ್ಷಿಯಾಗಿದ್ದಾನೆಂದು ಅನ್ನಿಸಿದರೆ, ಅದೂ ಸಹ ಸಾಕಾಗುವುದಿಲ್ಲ; ಸಾಕ್ಷಿದಾರನು ಅಸತ್ಯವನ್ನು

ಮಾತನಾಡುವ ಅಥವಾ ಸತ್ಯವನ್ನು ಮಾತನಾಡದಿರುವ ಅಪೇಕ್ಷೆಯಿಂದ ಪ್ರೇರೇಪಿತನಾಗಿ ಆತನನ್ನು ಕರೆದಿರುವ ಪಕ್ಷಕಾರನ ವಿರುದ್ಧ ಅಂತಹ ಪ್ರತಿಕೂಲ ದ್ವೇಷವನ್ನು ಹೊಂದಿರುತ್ತಾನೆಂಬ ಅಭಿಪ್ರಾಯಕ್ಕೆ ನ್ಯಾಯಾಲಯವು ಬರುವುದು ಅವಶ್ಯಕವಾಗಿರುತ್ತದೆ.

17. ಹಾಗಾಗಿ, ಅಂಥ ಪ್ರಕರಣಗಳಲ್ಲಿ, ಮೇಲೆ ನಮೂದಿಸಿದ ರೀತಿಯ ಅನಿರೀಕ್ಷಿತ ಸಂದರ್ಭವು 154 ನೇ ಪ್ರಕರಣದಡಿಯಲ್ಲಿ ತನ್ನ ವಿವೇಚನೆಯನ್ನು ಚಲಾಯಿಸಬೇಕಿದೆಯೇ ಮತ್ತು ಸಾಕ್ಷಿದಾರನನ್ನು ಕರೆಯುವ ಪಕ್ಷಕಾರನಿಗೆ ಪಾಟೀ-ಸವಾಲು ನಡೆಸಲು ಅನುಮತಿ ನೀಡಬೇಕಾಗಿದೆಯೇ ಎಂಬ ಪ್ರಶ್ನೆಯನ್ನು ನ್ಯಾಯಾಲಯವು ಪರಿಗಣಿಸಲು ಆರಂಭಿಕ ಅಂಶವಾಗಿರುತ್ತದೆ.

18. ಸಚ್ಚಿದಾನಂದ ಪ್ರಸಾದ್ -ವಿರುದ್ಧ-ಎಂಪರರ್ ಮನು/ಬಿಎಚ್/0320/1933 ಈ ಮೊಕದ್ದಮೆಯಲ್ಲಿ ರೋಲ್ಯಾಂಡ್ ಜೆ ಯವರು ಯಾರೇ ಸಾಕ್ಷಿದಾರರು ಪ್ರಾಸಿಕ್ಯೂಷನ್ನ ಪ್ರಕರಣಕ್ಕೆ ಪ್ರತಿಕೂಲವಾಗಿ ಅನಿರೀಕ್ಷಿತ ಹೇಳಿಕೆಯನ್ನು ನೀಡಿದಾಗ ಮಾತ್ರ 154 ನೇ ಪ್ರಕರಣದಡಿಯಲ್ಲಿನ ಅನುಮತಿಯನ್ನು ನಿರಾಕರಿಸಬಹುದು ಎಂದು ಅಭಿಪ್ರಾಯಪಟ್ಟಂತಹ ಪ್ರಕರಣಗಳಿಗೆ ಸಂಬಂಧಿಸಿರುತ್ತದೆ.ಅಭಿಪ್ರಾಯಗಳನ್ನು ಓದಿದ ಪ್ರಕಾರ ತಾತ್ಕಾಲಿಕವಾಗಿ ಏನನ್ನು ಸತ್ಯವೆಂದು ನಂಬಿದ್ದನೋ ಆ ವಿಚಾರವನ್ನು ಬಿಟ್ಟು ಬೇರೆ ದಾರಿ ಹಿಡಿಯಲು ಮಾಡುವ ಸಾಕ್ಷಿದಾರನ ಪ್ರಯತ್ನವು, ಯಾವ ಪಕ್ಷಕಾರನಿಗೆ ಸಾಕ್ಷಿದಾರನ ತನ್ನ ಅನಿರೀಕ್ಷಿತ ನಿರ್ಗಮನದಿಂದ ಬಾಧಕವಾಗ ಬಹುದೋ ಅಂತಹ ಪಕ್ಷಕಾರನು ಪಾಟೀ ಸವಾಲಿನ ಮೂಲಕ ಅವನ ಪ್ರಾಮಾಣಿಕತೆಯನ್ನು ಪರೀಕ್ಷಿಸುವಂತೆ ಅಗತ್ಯಪಡಿಸಿ, ಅವನು ಸತ್ಯವನ್ನು ಬಿಟ್ಟು ಬೇರೆ ದಾರಿ ಹಿಡಿಯಬಹುದೆಂದು ಅನುಮಾನಿಸಲು ಅವಕಾಶವಿದೆ ಎಂದು ಅರ್ಥವಾಗುತ್ತದೆ.

ಈ ಅಭಿಪ್ರಾಯಗಳನ್ನು ಈ ವಿವಾದಾಂಶದ ಮೇಲೆ ಯಾವುದೇ ಕಾನೂನಿನ ಸರ್ವ ಸಮ್ಮತ ಸೂತ್ರವನ್ನು ವಿಧಿಸಿರುವಂತೆ ಅರ್ಥೈಸಿಕೊಳ್ಳಲಾಗುವುದಿಲ್ಲ; ಅವುಗಳು ಪ್ರಯಾಣಿಕರಿಗೆ ದಿಕ್ಸೂ ಚಕಗಳಾಗಿ ಅಥವಾ ಕೈಪಿಡಿಗಳ ಸ್ವರೂಪದಲ್ಲಿರುತ್ತವೆ; ಆದಾಗ್ಯೂ, ಅನುಮತಿಯ ಸಿಂಧುತ್ವವನ್ನು ನಿರ್ಣಯಿಸುವ ವಿಷಯದಲ್ಲಾಗಲೀ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸುವುದಕ್ಕೆ ಸಂಬಂಧಸಿದಂತೆ ಅದನ್ನು ಅಲ್ಲಗಳೆಯುವ ವಿಷಯದಲ್ಲಾಗಲೀ ಇವು ನಿರ್ಣಯಕವಾಗಿರುವುದಿಲ್ಲ.

(viii) ಗುರಸಿಂಗ್ (ಹಿಂದೆ ಹೇಳಿದ) ಮೊಕದ್ದಮೆಯಲ್ಲಿನ ನಿರ್ಣಯವನ್ನು ಕ್ರಿಮಿನಲ್ ಅಪೀಲಿನಲ್ಲಿ ನೀಡಲಾಯಿತು.ಪ್ರತಿಕೂಲ ಸಾಕ್ಷ್ಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಭಾರತ ಸಾಕ್ಷ್ಯ ಎ ಅಧಿನಿಯಮ, 1872 ಹಾಗೂ 1865 ರ ಇಂಗ್ಲಿಷ್ ಅಧಿನಿಯಮದ ನಡುವಿನ ಭಿನ್ನತೆ ಬಗೆಗೆ ಸರ್ವೋಚ್ಚ ನ್ಯಾಯಾಲಯವು ಚ ನಮೂದಿಸಿರುತ್ತದೆ.ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸುವಲ್ಲಿ ಅದರಲ್ಲಿ ನಿರ್ದಿಷ್ಟವಾಗಿ, ಇಂಗ್ಲಿಷ್ ಕಾನೂನಿನಂತಲ್ಲದೆ, ಭಾರತೀಯ ಕಾನೂನಿನಲ್ಲಿ ಯಾವುದೇ ನಿರ್ಬಂಧಗಳಿರುವುದಿಲ್ಲವೆಂದು ನಿರ್ದಿಷ್ಟವಾಗಿ ಹೇಳಲಾಗಿರುತ್ತದೆ ಹಾಗೂ ಪತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀಯುತ ಆರ್. ಅಭಿನವವರು ಯುಕ್ತವಾಗಿಯೇ ವಾದಿಸಿರುವಂತೆ ಆ ಮೂಲಕ ಆತನನ್ನು ಪಾಟೀ-ಸವಾಲು ಮಾಡಲು ಪಕ್ಷಕಾರನನ್ನು ಸಮರ್ಥಗೊಳಿಸುತ್ತದೆ.ಮತ್ತೆ, ಮಾನ್ಯ ವಕೀಲರಾದ ಶ್ರೀಯುತ ಪಾಟೀಲರು ಅವಲಂಬಿಸಿರುವ ಅದರಲ್ಲಿನ ಕಂಡಿಕೆ 13 ರಲ್ಲಿ ನೀಡಿರುವ ನ್ಯಾಯಾಲಯದ ಅಭಿಪ್ರಾಯಗಳು ಆತನ ವಾದವನ್ನು ಹೆಚ್ಚು ಮುನ್ನಡೆಸುವುದಿಲ್ಲ.ಚ ಪಬ್ಲಿಕ್ ಪ್ರಾಸಿಕ್ಯೂಟರ್ (ಸರ್ಕಾರಿ ಅಭಿಯೋಜಕರು) ಮನವಿಯನ್ನು ಮಾಡಿಕೊಂಡಿರುವ ವಿಧಾನಕ್ಕೆ ಮತ್ತು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಯಾವುದೇ ಪ್ರತಿಕೂಲತೆಯ

ಅಂಶಗಳಿಲ್ಲದಿದ್ದರೂ ಆಪಾದಿಸಿದಂತೆ ಅವನು ಪ್ರತಿಕೂಲ ಸಾಕ್ಷಿಯಾಗಿದ್ದಾನೆಂಬ ಕಾರಣದ ಮೇಲೆ ಪಿ.ಡಬ್ಲ್ಯು .2 ನ್ನು ಪಾಟೀ-ಸವಾಲು ಮಾಡಲು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ನೀಡಿದ ಅನುಮತಿಯ ಬಗ್ಗೆ ಅಸಮ್ಮತಿ ವ್ಯಕ್ತಪಡಿಸಿದ್ದಾರೆ.ಗ ಆದಾಗ್ಯೂ, ಪ್ರಸ್ತುತ ರಿಟ್ ಅರ್ಜಿಯಲ್ಲಿ, ಮುಖ್ಯ ಸಾಕ್ಷ್ಯವನ್ನು ಪ್ರತಿಕೂಲದ ಸಾಕ್ಷಿಯೆಂದು ಪರಿಗಣಿಸುವುದನ್ನು ಸಮರ್ಥಿಸಿಕೊಳ್ಳುವಂಥ ಅಂಶಗಳು ಇದ್ದು, ಇವು ಪ್ರಕರಣಕ್ಕೆ ಎಲ್ಲಾ ಭಿನ್ನತೆಯನ್ನು ರೂಪಿಸುತ್ತವೆ; ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಏನನ್ನು ಹೇಳಿತ್ತೊ ಅದು ಭಾರತ ಸಂವಿಧಾನದ 141 ನೇ ಅನುಚ್ಛೇದದಡಿಯಲ್ಲಿ ಮಾಡಲಾಗಿರುವ ಕಾನೂನಿನ ಘೋಷಣೆಗಳಂತಲ್ಲದೆ, ಪ್ರಸ್ತುತವಾಗಿ ಹೆಚ್ಚು ಸುಸಂಗತವಾಗಿಲ್ಲ.

(ix) ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಪ್ರತ್ಯರ್ಜಿದಾರರಿಗೆ ತನ್ನ ಸಾಕ್ಷಿದಾರರಾದ ಡಿಡಬ್ಲ್ಯು 3 ಹಾಗೂ ಡಿಡಬ್ಲ್ಯು.4 ರನ್ನು ಪಾಟೀ-ಸವಾಲು ಮಾಡಲು ಆಕೆಗೆ ಸಾಧ್ಯವಾಗುವಂತೆ ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಲು ತಾವು ಏಕೆ ಅನುಮತಿ ನೀಡಿದರೆಂಬುದಕ್ಕೆ ಕಾರಣಗಳನ್ನು ನೀಡಿರುತ್ತಾರೆ; ಪ್ರಶ್ನಿತ ಆದೇಶದ 7 ನೇ ಪ್ಯಾರಾದಲ್ಲಿ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತಾರೆ:

"7. ಮೇಲೆ ಹೇಳಿದಂತೆ, ಡಿಬ್ಲ್ಯು .3 ಹಾಗೂ ಡಿಡಬ್ಲ್ಯು .4 ರವರುಗಳು ವಾದಿಯ ತಂದೆ ತಾಯಿಯರಾಗಿರುತ್ತಾರೆ ಹಾಗೂ ಅವರ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದಿಯು 20,00,000/-ರೂಪಾಯಿಗಳನ್ನು ಮರು ಸಂದಾಯ ಮಾಡಿರುವುದನ್ನು ನಿರಾಕರಿಸಿರುತ್ತಾರೆ ಹಾಗೂ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ನಿರ್ದಿಷ್ಟವಾಗಿ, ವಾದಿಯ ಸೂಚನೆಯ ಪ್ರಕಾರವೇ ವಾದಿಯ ತಂದೆ ತಾಯಿಯರಿಗೆ ಬಡ್ಡಿಯೊಂದಿಗೆ 20,00,000/-ರೂಪಾಯಿಗಳ ಸದರಿ ಮೊಬಲಗನ್ನು ಸಂದಾಯ ಮಾಡಲಾಗಿತ್ತೆಂದು ನಿರ್ದಿಷ್ಟವಾಗಿ ವಾದಿಸಿದ್ದಾರೆ.ವಾದ ಹೀಗಿರುವಾಗ ವಾದಿಗಳ ತಂದೆ ತಾಯಿಯಾಗಿರುವ ಡಿಡಬ್ಲ್ಯೂ .3 ಹಾಗೂ ಡಿಡಬ್ಲ್ಯೂ .4 ರವರುಗಳು ತಮ್ಮ ಮಗನಿಗೆ ನೆರವು ನೀಡುವ ದೃಷ್ಟಿಯಿಂದ ಸಾಕ್ಷ್ಯ ಎ ನೀಡಿರಬಹುದೆಂಬ ಪ್ರತಿವಾದಿಯ ವಕೀಲರ ನಿವೇದನೆಯಲ್ಲಿ ಪರಿಗಣಿಸಬಹುದಾದ ಅಂಶವಿರುತ್ತದೆಂದು ನಾನು ಭಾವಿಸುತ್ತೇನೆ.ಹಾಗಾಗಿ, ಡಿಡಬ್ಲ್ಯೂ .3 ಹಾಗೂ ಡಿಡಬ್ಲ್ಯೂ .4 ರವರುಗಳನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಪ್ರತಿವಾದಿಗಳ ವಕೀಲರಿಗೆ ಅನುಮತಿ ನೀಡಬೇಕಾಗುತ್ತದೆ ಹಾಗೂ ಅವರನ್ನು ಪಾಟೀ ಸವಾಲು ಮಾಡಲು ಅವರಿಗೆ ಅನುಮತಿ ನೀಡಬೇಕಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿರುತ್ತದೆ.



ಈ ಅಭಿಪ್ರಾಯಗಳು ವಿವಾದಾಂಶಕ್ಕೆ ಸುಸಂಗತವಾಗಿರುವುದರಿಂದ ಪ್ರಶ್ನಿತ ಆದೇಶಕ್ಕೆ ಪೂರಕವಾಗಿದೆ.

( X) ಮೇಲ್ಕಂಡ ಅಂಶವಲ್ಲದೆ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಸಾಕ್ಷಿದಾರರಾದ ಡಿಡಬ್ಲ್ಯೂ .3 ರ ವರ್ತನೆಯನ್ನು ಸಹ ಗಮನಿಸಿರುತ್ತಾರೆ.ಆದ್ದರಿಂದ ಪ್ರಶ್ನಿತ ಆದೇಶವನ್ನು ಕಾರಣಗಳ ವಿಘಟನೆಯೆಂದು ಹೇಳಲಾಗುವುದಿಲ್ಲ.ಆದಾಗ್ಯೂ, ತಾತ್ವಿಕವಾಗಿ ಹೇಳುವುದಾದರೆ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿಯನ್ನು ನೀಡಬೇಕಾಗಿತ್ತೆ ಎಂಬುದನ್ನು ನಿರ್ಧರಿಸುವಲ್ಲಿ ಅರ್ಜಿದಾರನಿಗೆ

ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಬಹುದೆತ್ತೆಂಬುದು ನಿಜ. ಆದರೆ, ಅರ್ಜಿದಾರನನ್ನು ಈ ನ್ಯಾಯಾಲಯವು ವಿಷಯದ ಈ ದೃಷ್ಟಿಕೋನವನ್ನು ಕುರಿತಂತೆ ಸುದೀರ್ಘವಾಗಿ ವಿಚಾರಣೆ ಮಾಡಲಾಗಿರುತ್ತದೆ ಹಾಗೂ ಪ್ರಶ್ನಿತ ಆದೇಶದ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡದಿರುವಲ್ಲಿ ವಾದಿಸಬಹುದಾದ ಕಾನೂನಿನ ದೌರ್ಬಲ್ಯತೆ ಏನೇ ಆಗಿದ್ದರೂ, ಈ ನ್ಯಾಯಾಲಯವು ಈ ವಿಷಯದಲ್ಲಿ ಸುದೀರ್ಘ ವಾದಕ್ಕೆ ಅನುಮತಿ ನೀಡುವ ಮೂಲಕ ಸರಿಪಡಿಸುತ್ತದೆ.ಇಷ್ಟಾದರೂ, ಪ್ರಶ್ನಿತ ಆದೇಶವು ಸಂಪೂರ್ಣವಾಗಿ ವಿವೇಚನಾ ಆದೇಶಗಳ ವರ್ಗಕ್ಕೆ ಸೇರುತ್ತಿದ್ದು, ಇದನ್ನು ಈ ನ್ಯಾಯಾಲಯವು, ಟ್ರೈಂಬಕ್ ಗಂಗಾಧರ್ ತೆಲಂಗ -ವಿರುದ್ಧ- ರಾಮಚಂದ್ರ ಗಣೇಶ್ ಭಿಡೆ, ಮೇರೆಗೆ ಭಾರತ ಸಂವಿಧಾನದ 227 ನೇ ಅನುಚ್ಛೇದದಡಿಯಲ್ಲಿ ತನ್ನ ಅಸಾಧಾರಣವಾದ ಆದರೆ ಸೀಮಿತ ಅಧಿಕಾರವ್ಯಾಪ್ತಿಯಲ್ಲಿ ಆಳವಾದ ವಿಚಾರಣೆಯನ್ನು ಕೈಗೊಳ್ಳುವುದಿಲ್ಲ.

(xi) ವಿಷಯದಲ್ಲಿ ವಿಶೇಷಾಧಿಕಾರವನ್ನು ನೀಡದಿರುವುದಕ್ಕೆ ಇನ್ನೂ ಒಂದು ಕಾರಣವಿದೆ.ಪ್ರತಿಕೂಲ ಸಾಕ್ಷಿಯಾಗಿ ಒಬ್ಬ ವ್ಯಕ್ತಿಯನ್ನು ಕರೆದಿರುವ ಪಕ್ಷಕಾರನು, ಸಾಕ್ಷಿದಾರನು ನೀಡಿದ ಎಲ್ಲಾ ಹೇಳಿಕೆಗಳಿಗೆ ಬದ್ಧನಾಗಿರುವುದಿಲ್ಲ.ಪಕ್ಷಕಾರನು ಸಾಕ್ಷಿದಾರನು ಮಂಡಿಸುವಂತಹ ಸಾಕ್ಷ್ಯಕ್ಕೆ ಬದ್ಧನಾಗಿರುವುದಿಲ್ಲ ಹಾಗೂ ಅಂಥ ಸಾಕ್ಷಿದಾರನ ಹೇಳಿಕೆಯ ಯಾವ ಭಾಗವು, ಸಾಕ್ಷಿದಾರನನ್ನು ಕರೆದ ಪಕ್ಷಕಾರನ ಪರವಾಗಿ ಒಪ್ಪಿಗೆಯಾಗುವುದಿಲ್ಲ, ತಾನು ಹಾಜರುಪಡಿಸಿ ಸಾಕ್ಷಿದಾರನು ಕೆಲವು ನಿರ್ದಿಷ್ಟ ಅಂಶಗಳ ಮೇಲೆ ಸತ್ಯವನ್ನು ಹೇಳುವುದಿಲ್ಲವೆಂದು ಹೇಳಲು ಪಕ್ಷಕಾರನಿಗೆ ಸಾಧ್ಯವಾಗುವುದಿಲ್ಲವೆಂಬ ಬಗ್ಗೆ ಕಾನೂನಿನ ಯಾವುದೇ ನಿಯಮವಿರುವುದಿಲ್ಲ.ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿಯಾಗಿ ಪಾಟೀ ಸವಾಲು ಮಾಡಲು ಅನುಮತಿ ನೀಡುವುದಕ್ಕೆ ನ್ಯಾಯಾಲಯವು ನಿರಾಕರಿಸುತ್ತದೆಂದರೆ, ನ್ಯಾಯಾಲಯವು ಅಂತಹ ಸಾಕ್ಷಿದಾರನನ್ನು ಸತ್ಯವಂತ ಸಾಕ್ಷಿಯೆಂದು ಪರಿಗಣಿಸುತ್ತದೆಂದು ಅವಶ್ಯಕವಾಗಿ ಸೂಚಿಸುತ್ತದೆಂದಲ್ಲ.ಅಂತೆಯೇ, ಅನುಮತಿ ನೀಡುವುದು, ಒಟ್ಟಾರೆಯಾಗಿ ಆತನ ಸಾಕ್ಷ್ಯವು ನಂಬಿಕಾರ್ಹ ಹಾಗೂ ವಿಶ್ವಾಸಾರ್ಹವಲ್ಲವೆಂದು ಘೋಷಿಸಲು ಕಾರಣವಾಗುವುದಿಲ್ಲ; (ಎಂಪರರ್ -ವಿರುದ್ಧ ಹರಧನ್, ಎಐಆರ್ 1933 ಪಾಟ್ನಾ 517) ಅಂಥ ಸಾಕ್ಷಿದಾರನ ಇಡೀ ಸಾಕ್ಷ್ಯವನ್ನು ಪರಿಶೀಲಿಸುವುದು ಮತ್ತು ಅಂಥ ಸಾಕ್ಷಿಯ ಯಾವ ಭಾಗ ಸ್ವೀಕಾರಾರ್ಹವಾಗಿದೆ ಎಂಬುದನ್ನು ನಿರ್ಧರಿಸುವುದು ನ್ಯಾಯಾಲಯದ ವಿವೇಚನೆಗೆ ಬಿಟ್ಟ ವಿಷಯ.ಪ್ರಫುಲ್ಲ ಕುಮಾರ್ ಸರ್ಕಾರ್ ಮೊಕದ್ದಮೆಯಲ್ಲಿ ಹಿಂದೆ ಹೇಳಿದ) ಕಲ್ಕತ್ತಾ ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ಮುಖ್ಯ ನ್ಯಾಯಾಧೀಶರಾದ ರಂಕಿನ್ ಸಿ.ಜೆ. ರವರು ಈ ಮುಂದಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ:

" ನನ್ನ ಅಭಿಪ್ರಾಯದಲ್ಲಿ, ಸಾಕ್ಷ್ಯ ಅಧಿನಿಯಮದ 154 ನೇ ಪ್ರಕರಣದಡಿಯಲ್ಲಿ ಸಾಕ್ಷಿದಾರನ ಬಗ್ಗೆ ವ್ಯಾಖ್ಯಾನಿಸಲಾಗಿದೆ ಎಂಬ ೧ ಅಂಶವು, ಆ ಪ್ರಕರಣದಡಿಯಲ್ಲಿ ವಿಶ್ವಾಸಾರ್ಹತೆಗೆ ಅವನನ್ನು ಪಾಟೀ ಸವಾಲಿಗೆ ಒಳಪಡಿಸಿದಾಗಲೂ, ಕೂಡ ತನ್ನ ಸಾಕ್ಷ್ಯದ ಮೇಲೆ ಯಾವುದೇ ವಿಶ್ವಾಸವನ್ನು ಇಡಲು ಅವರು ಕಾನೂನಿನಲ್ಲಿ ಬದ್ಧರಾಗಿರುತ್ತಾರೆ ಎಂಬ ಅಥವಾ ಆತನನ್ನು ಕರೆದು, ಅವನ ಪಾಟೀ-ಸವಾಲು ಮಾಡಿದಂಥ ಪಕ್ಷಕಾರನು ಆತನ ಸಾಕ್ಷ್ಯದ ಯಾವುದೇ ಭಾಗದಿಂದ ಯಾವುದೇ ಅನುಕೂಲ ಪಡೆಯಲಾಗುವುದಿಲ್ಲ ವೆಂಬ ತೀರ್ಪುಗಾರರಿಗೆ ಯಾವುದೇ ರೀತಿಯಲ್ಲಿ ವಿವೇಚನೆ ನೀಡುವುದಿಲ್ಲ.ಅದಲ್ಲದೆ, ತೀರ್ಪುಗಾರರು, ಅವರು ಇನ್ನೊಬ್ಬರಿಗೆ ಮನ್ನಣೆ ನೀಡದಿರಬಹುದೆಂದು ಒಂದು ಹಂತದಲ್ಲಿ ಸಾಕ್ಷಿದಾರನ ಬಗ್ಗೆ ಅಪನಂಬಿಕೆ ಹೊಂದಿದರೆ ಎಂಬ ಬಗ್ಗೆ ಕಾನೂನಿನಲ್ಲಿ ಯಾವುದೇ ನಿಯಮ ಇರುವುದಿಲ್ಲ "

(xii) ಪ್ರಸಿದ್ಧ ಇಂಗ್ಲಿಷ್ ತೀರ್ಪುಗಾರ, ರುಪರ್ಟ್ ಕ್ರಾಸ್ ( " ಎವಿಡೆನ್ಸ್ ":ಸಂಪುಟ .3, ಲಂಡನ್-ಬಟರ್ವರ್ತ್ 1961, ಪುಟ 206 ಮತ್ತು 207) ರಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತಾರೆ:

" ನ್ಯಾಯಾಧೀಶರು, ನ್ಯಾಯ ನೀಡಿಕೆಯ ಉದ್ದೇಶಕ್ಕಾಗಿ ಅವಶ್ಯಕವೆಂದು ಪರಿಗಣಿಸುವ ಮಟ್ಟಿಗೆ ಪಾಟಿ ಸವಾಲಿನ ರೀತಿಯಲ್ಲಿ ನಡೆಸಬೇಕಾದ ಪ್ರತಿಕೂಲ ಸಾಕ್ಷಿಯ ಮುಖ್ಯ ಪರೀಕ್ಷೆಯನ್ನು ನಡೆಸಲು ಅನುಮತಿ ನೀಡಬಹುದು.ಸಾಕ್ಷಿದಾರನ ಸ್ಮರಣೆ ಹಾಗೂ ಗ್ರಹಿಕೆ ನಿಖರತೆಯಂತಹ ವಿಷಯಗಳ ಮೇಲೆ ಸಾಕ್ಷ್ಯ ಎ ನೀಡುವ ಅಥವಾ ಪರೀಕ್ಷಿಸುವ ಸ ಂ ಗತಿಗಳ ತಿಳುವಳಿಕೆಯ ಸಾಧನಗಳಿಗೆ ಸಂಬಂಧಿಸಿದಂತೆ ಸಾಕ್ಷಿದಾರನಿಗೆ ಪ್ರಮುಖ ಪ್ರಶ್ನೆಗಳನ್ನು ಕೇಳಬಹುದು ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ನೀಡಬಹುದೇ ಎಂಬುದನ್ನು ನಿರ್ಧರಿಸುವಲ್ಲಿ ನ್ಯಾಯಾಧೀಶರು ಸಾಕ್ಷಿಗಳ ವರ್ತನೆ, ಅವರು ನೀಡಿದಂಥ ಅಸಂಗತ ಹೇಳಿಕೆಗಳು ಹಾಗೂ ಯಾವ ಸಂದರ್ಭಗಳಲ್ಲಿ ಆ ಹೇಳಿಕೆ ನೀಡಲಾಗಿತ್ತು ಎಂಬ ಸಂಗತಿಯನ್ನು ಗಮನದಲ್ಲಿಟ್ಟುಕೊಳ್ಳಬಹುದು ಎಂಬ ಬಗ್ಗೆ ಯಾವುದೇ ಸಂದೇಹವಿರುವಂತೆ ತೋರುವುದಿಲ್ಲ."

ಹಾಗಾಗಿ, ಪ್ರಶ್ನಿತ ಆದೇಶವು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರ ವಿಸ್ತೃತ ವಿವೇಚನೆಯ ಫಲಿತವಾಗಿರುವುದರಿಂದ, ಈ ನ್ಯಾಯಾಲಯವು, ಮೇಲಿನ ತೀರ್ಪುಗಾರರ ಅಭಿಪ್ರಾಯಕ್ಕೆ ನಿಷ್ಠವಾಗಿದ್ದು, ಸದರಿ ವಿಚಾರವನ್ನು ಆಳವಾಗಿ ಪರಿಶೀಲಿಸಲು ನಿರಾಕರಿಸುತ್ತದೆ.

ಮೇಲಿನ ಸಂದರ್ಭಗಳ ಹಿನ್ನೆಲೆಯಲ್ಲಿ, ಈ ರಿಟ್ ಅರ್ಜಿಯಲ್ಲಿ ಯಾವುದೇ ಹುರುಳಿಲ್ಲದ ಕಾರಣ, ಅದನ್ನು ತಿರಸ್ಕರಿಸಲಾಗಿದೆ.

ವೆಚ್ಚಗಳನ್ನು ಸುಲಭ ಸಾಧ್ಯವಾಗಿಸಿದೆ.